**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**ಎಸ್ .ಸಿ. ನಂ: 49/2023**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂ: **01**
ಸಿ.ಡಬ್ಲ್ಯೂ ನಂ: **01**
ಸಾಕ್ಷಿಯನ್ನು ದಿನಾಂಕ: **02-09-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | : | ಶರಣಪ್ಪ ಬೇವಿನಗಿಡದ |
| ತಂದೆಯ ಹೆಸರು | : | ಹೊಳೆಗೌಡ |
| ವಯಸ್ಸು | : | **59** ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಲಿಂಗನಬಂಡಿ |

ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ

ಚಾಸಾ **8** ನನ್ನ ಹೆಂಡತಿ. ಚಾಸಾ **2** ನನ್ನ ಮಗಳು. ಚಾಸಾ **9** ನನ್ನ ಮೊಮ್ಮಗ. ಈಗ ಕಾರಾಗೃಹದಿಂದ ವಿಸಿ ಮೂಲಕ ಹಾಜರುಪಡಿಸಿರುವ ಆರೋಪಿ ನನ್ನ ಅಳಿಯ. ಸುಮಾರು **10-12** ವರ್ಷಗಳ ಹಿಂದೆ ಆರೋಪಿ ಹಾಗೂ ಚಾಸಾ **2** ರವರ ಮದುವೆಯಾಗಿತ್ತು. ಅವರಿಗೆ ಇಬ್ಬರು ಗಂಡುಮಕ್ಕಳು. ಮದುವೆಯಾದ ನಂತರ ಅವರಿಬ್ಬರು ಸುಮಾರು **5-6** ವರ್ಷ ಚೆನ್ನಾಗಿದ್ದು ಆ ನಂತರ ಆರೋಪಿ ನನ್ನ ಮಗಳಿಗೆ ಕಿರುಕುಳ ಕೊಡುತ್ತಿದ್ದ. ಮದ್ಯಪಾನ ಮಾಡಿ ಬಂದು ಆಕೆಗೆ ಹೊಡೆಯುವುದು ಬಡಿಯುವುದು ಮತ್ತು ರೊಕ್ಕ ತೆಗೆದುಕೊಂಡು ಬಾ ಎಂದು ಹಿಂಸೆ ಕೊಡುತ್ತಿದ್ದ. ವರೋಪಚಾರ ಕೊಡಬೇಕಾಗಿತ್ತು ಆದರೆ ಕೊಟ್ಟಿರಲಿಲ್ಲ, ಆದುದರಿಂದ ನಾವು ಕೊಡಬೇಕಾಗಿದ್ದ **2** ಲಕ್ಷ ರೂ. ಕೊಡುವಂತೆ ಒತ್ತಾಯಿಸಿದ ಕಾರಣ ನಾನು ಒಮ್ಮೆ ರೂ.**30,000/-** ಕೊಟ್ಟಿದ್ದೆ. ಆದರೂ ಸಹಾ ನನ್ನ ಮಗಳನ್ನು ಹೊಡೆಯುವುದು ಮತ್ತು ಬಡಿಯುವುದನ್ನು ನಿಲ್ಲಿಸಿರಲಿಲ್ಲ. ನಮ್ಮೂರಿನ **4** ಮಂದಿಯನ್ನು ಕರೆದುಕೊಂಡು ಹೋಗಿ ಆರೋಪಿಗೆ ಬುದ್ದಿವಾದ ಹೇಳಿದ್ದೆವು. ಆದರೂ ಸಹಾ ಅವನು ಕಿರುಕುಳ ಕೊಡುವುದನ್ನು ಮುಂದುವರೆಸಿದ್ದ. ಆದುದರಿಂದ ನಾನು ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದೆ.

**2).** ಇನ್ನು ಮೇಲೆ ಕಿರುಕುಳ ಕೊಡುವುದಿಲ್ಲ ಎಂದು ಹೇಳಿ ನಮ್ಮ ಊರಿನಲ್ಲಿ ಆರೋಪಿ **8-10** ದಿನ ಇದ್ದು ದಿ: **22-2-2023** ರಂದು ಬೆಳಿಗ್ಗೆ **9-30--10-00**

ಗಂಟೆ ಸುಮಾರಿಗೆ ರೂ.1500/- ನನ್ನಿಂದ ಪಡೆದುಕೊಂಡು ಮಕ್ಕಳಿಗೆ ದವಾಖಾನೆಯಲ್ಲಿ ತೋರಿಸುತ್ತೇನೆ ಎಂದು ಎಲ್ಲರನ್ನು ಯಾಪಲದಿನ್ನಿಯ ತನ್ನ ಮನೆಗೆ ಕರೆದುಕೊಂಡು ಹೋಗಿದ್ದ. ಮಕ್ಕಳಿಗೆ ಆರಾಮ ಇಲ್ಲ ಕಳ್ಳಿಹಾಲು ಹೆಚ್ಚಿಕೊಂಡು ಬರುತ್ತೇನೆ ಕುಡುಗೋಲು ಕೊಡು ಎಂದು ತನ್ನ ತಾಯಿ ಅಂಬವ್ವಳನ್ನು ಕೇಳಿದಾಗ ಆರೋಪಿಯ ತಂದೆ ಕುಡುಗೋಲನ್ನು ಅಂಬವ್ವಳಿಗೆ ಕೊಟ್ಟ. ಆರೋಪಿಯ ತಮ್ಮಂದಿರಾದ ಕನಕರಾಯ, ಮಂಜುನಾಥ ನೀನು ಹೋಗುವುದು ಹೋಗುತ್ತಿಯಾ ಎಲ್ಲಾ ಮುಗಿಸಿ ಬಾ ನಾವು ನಿನ್ನ ಹಿಂದೆ ಇದ್ದೇವೆ ಎಂದು ಹೇಳಿದರು.

3). ಆರೋಪಿ ಹೆಂಡತಿ ಮಕ್ಕಳನ್ನು ಅವರ ಹೊಲಕ್ಕೆ ಕರೆದುಕೊಂಡು ಹೋಗಿ ಕುಡುಗೋಲಿನಿಂದ ಚಾಸಾ 2 ರ ಮೈಕೈಗೆ ಹೊಡೆದಾಗ ಮಕ್ಕಳು ಬಿಡಿಸಲು ಹೋಗಿದ್ದು ನಿಮ್ಮ ತಾಯಿಗೆ ಹೊಡೆದ ಹಾಗೇ ನಿಮಗೆ ಹೊಡೆಯುತ್ತೇನೆ ಎಂದು ಆರೋಪಿ ಹೆದರಿಸಿದಾಗ ಅವರು ಅಲ್ಲಿಂದ ಓಡಿ ಹೋದರು. ಚಾಸಾ 2 ರವರಿಗೆ ಜಾಸ್ತಿ ಗಾಯಗಳಾಗಿದ್ದ ಕಾರಣ ಅವಳು ಅಲ್ಲೇ ಕುಸಿದು ಬಿದ್ದಿದ್ದು ಯಾರೋ ಅಂಬುಲೆನ್ಸನಲ್ಲಿ ಕರೆದುಕೊಂಡು ಬಂದು ಬೇವೂರು ಆಸ್ಪತ್ರೆಗೆ ಸೇರಿಸಿದ್ದರು. ನಂತರ ಅವರು ಆಕೆಯನ್ನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ತಂದಿದ್ದರು. ನನ್ನ ಮಗಳು ಉಳಿಯುವ ಸಂಭವ ಇಲ್ಲ ಎಂದು ತಿಳಿದುಕೊಂಡು ನಾನು ಆಕೆಯನ್ನು ಕೆ ಎಸ್ ಆಸ್ಪತ್ರೆಗೆ ಸೇರಿಸಿದೆ. ನನ್ನ ಮಗಳಿಗೆ ಅರಿವು ಬಂದ ಮೇಲೆ ವಿಚಾರಿಸಿ ನಂತರ ನಾನು ಪೊಲೀಸರಿಗೆ ದೂರು ಕೊಟ್ಟೆ. ಈಗ ನೋಡಿದ ದಾಖಲೆ ಸದರಿ ದೂರು ಆಗಿರುತ್ತದೆ. <u>ದೂರನ್ನು ನಿಪಿ 1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 1(ಎ) ಎಂದು</u> ಗುರುತಿಸಲಾಯಿತು.

ಪ್ರಶ್ನೆಃ ದೂರನ್ನು ಯಾರ ಕಡೆಯಿಂದ ಬರೆಸಿಕೊಟ್ಟಿರಿ?

ಉತ್ತರಃ ನನ್ನ ತಮ್ಮ ಶರಣಗೌಡ ಎನ್ನುವರು ಬರೆದರು.

<u>ಪಾಟೀ ಸವಾಲು : ಆರೋಪಿಯ ಪರ ಸಿ ಎಲ್ ಎ ಡಿ ಸಿ</u>

4). ನಾನು 1ನೇ ತರಗತಿ ಅಷ್ಟೇ ಓದಿದ್ದೇನೆ. ನನಗೆ ಓದಲು ಬರೆಯಲು ಬರುತ್ತದೆ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ 1(ಎ) ಸಹಿಯನ್ನು ನಾನು ಬೇವೂರು ಪೊಲೀಸ ಠಾಣೆಯಲ್ಲಿ ಮಾಡಿದ್ದೆ. ದೂರು ಬರೆಯುವ ಮೊದಲೇ ಖಾಲಿ ಕಾಗದದ ಮೇಲೆ ಪೊಲೀಸರು ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ನಿಪಿ 1ರ 2ನೇ ಪುಟದಲ್ಲಿ ನಿಪಿ 1(ಎ) ಸಹಿ

ಇರುವ ಸುಮಾರು 6-7 ಸಾಲುಗಳ ಮೇಲೆ ನನ್ನ ಮತ್ತೊಂದು ಸಹಿ ಇದೆ. ಸದರಿ ಸಹಿಯನ್ನು ಖಾಲಿ ಕಾಗದದ ಮೇಲೆ ಮೊದಲೇ ಚಾಸಾ 25 ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ.

**5).** ದಿಃ **22-2-2023** ರಂದು ಸಂಜೆ **4-30** ಗಂಟೆಗೆ ನನ್ನ ಮಗಳು ಬಿದ್ದಿದ್ದಾಳೆ ಎಂದು ತಿಳಿಸಲು ಪೊಲೀಸರು ನನಗೆ ಫೋನು ಮಾಡಿರಲಿಲ್ಲ. ಚಾಸಾ 2 ರವರನ್ನು ಜಿಲ್ಲಾ ಆಸ್ಪತ್ರೆಗೆ ಸೇರಿಸಿದ ನಂತರ ನನಗೆ ವಿಚಾರ ಗೊತ್ತಾಯಿತು. ನಾನು ಆಸ್ಪತ್ರೆ ಬಳಿ ಹೋದಾಗ 5 ಗಂಟೆಯಾಗಿತ್ತು. ನಾನು ನಮ್ಮ ಊರಿನಿಂದ ಬೇವೂರಿಗೆ ಬಂದು ಅಲ್ಲಿ ವಿಚಾರಿಸಿ ಕೊಪ್ಪಳಕ್ಕೆ ಬರಲು ಸುಮಾರು 2-3 ಗಂಟೆ ಬೇಕಾಗುತ್ತದೆ ಎಂದರೆ ನಾನು ಕೊಪ್ಪಳ ಆಸ್ಪತ್ರೆಗೆ ಬಂದಾಗ 5 ಗಂಟೆಯಾಗಿತ್ತು ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ನಾನು ಜಿಲ್ಲಾಸ್ಪತ್ರೆಗೆ ಬರುವಷ್ಟರಲ್ಲಿ ಪೊಲೀಸರು ಇದ್ದರು. ನನ್ನನ್ನು ವಿಚಾರಿಸಿ ಆಗ ಪೊಲೀಸರು ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರಲಿಲ್ಲ.

**6).** ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ನನ್ನ ಮಗಳನ್ನು ಬಸವರಾಜ ಎಂಬುವರು ಅಂಬುಲೆನ್ಸನಲ್ಲಿ ಕರೆದುಕೊಂಡು ಬಂದಿರಲಿಲ್ಲ. ನಾನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಬಂದಾಗ ಚಾಸಾ 2 ರವರ ತಮ್ಮ ಬಸವರಾಜ ಅಲ್ಲಿರಲಿಲ್ಲ. ಚಾಸಾ 2 ರವರಿಗೆ ರಸ್ತೆ ಅಪಘಾತದಲ್ಲಿ ಗಾಯಗಳಾಗಿವೆ ಎಂದು ಜಿಲ್ಲಾ ಆಸ್ಪತ್ರೆಯಲ್ಲಿ ಮಾಹಿತಿ ಕೊಟ್ಟು ಬರೆಸಲಾಗಿತ್ತು ಎಂದರೆ ಆಕೆಗೆ ಕುಡುಗೋಲಿನಿಂದ ಹಲ್ಲೆಯಾದ ಕಾರಣ ಗಾಯಗಳಾಗಿದ್ದವು ಎಂದು ಸಾಕ್ಷಿದಾರರು ನುಡಿದಿರುತ್ತಾರೆ.

ಕೋರಿಕೆಯ ಮೇರೆಗೆ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ